" Into the strife of the throng and
the tumult.
The war of sweet love against jolly
and wrong;
Where brave hearto carry the sword
of battle
'Tis mine to carry the banner of
song "

Mrs. Sarojini Naidu

---

Printed at
The K. K. Press, Gulbarga.
Published by,
The Reception Committee 30 th Kannada
Sahitya Sammelana, Harapanhalli.

೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ
ಕಲಬುರಗಿ
ಮಾರ್ಚ ೫, ೬, ೭, ೧೯೪೯

# ಸ್ವಾಗತಾಧ್ಯಕ್ಷರ ಭಾಷಣ



ಶ್ರೀ. ಸಿದ್ಧಯ್ಯ ಕಲ್ಲಿನಾಥಶಾಸ್ತ್ರಿ ಪುರಾಣಿಕ ಬಿ. ಎ.
ಸ್ವಾಗತ ಸಮಿತಿಯ ಅಧ್ಯಕ್ಷರು :

ಶಿವಮಸ್ತು ಸರ್ವ ಜಗತಾಂ
ಪರ ಹಿತ ನಿರತಾ ಭವಂತು ಭೂತಗಣಾಃ
ದೋಷಾಃ ಪ್ರಯಾಂತು ನಾಶಂ
ಸರ್ವತ್ರ ಸುಖೀಭವತು ಲೋಕಃ

— ಶ್ರೀಪಸ

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ-
ಖೋಪಾತ್ತಮಿದೆಂದರಿಪುಗು
ಮಾ ಪರಮುಕವಿಪ್ರಧಾನರಾ ಕಾವ್ಯಂಗಳ್-

— ಅಮೋಘವರ್ಷ ನೃಪತುಂಗ.

Remind yourself that the world is what we make it, and that to the making of it each one of us can contribute something. This thought makes hope possible and in this hope, though life will be still painful, it will be no longer purposeless.

— *Bertrand Russell*

"Our life is but a little holding, lent
To do a mighty labour, we are one
With heaven and the stars when it is spent
To serve God's aim; else die we with the Sun"

— *Meredith*

"The passion for truth, goodness, beauty and freedom gives meaning to life"

— *Pandit Nehru*

# "ಶ್ರೀಶರಣ"

ವಿಷ್ಣುರ್ವಾ ತ್ರಿಪುರಾಂತಕೋ ಭವತು ವಾ ಬ್ರಹ್ಮ ಸುರೇಂದ್ರೋಽಥವಾ
ಭಾನುರ್ವಾ ಶಶಲಾಂಛನೋಽಥ ಭಗವಾನ್ ಬುದ್ಧೋಽಥ ಸಿದ್ಧೋಽಥವಾ
ರಾಗದ್ವೇಷವಿಷಾರ್ತಿ ದೋಷರಹಿತಃ ಸತ್ವಾನುಕಂಪೋದ್ಯತೋ
ಯಃ ಸರ್ವೈಃ ಸಹ ಸಂಸ್ಕೃತೋಗುಣಗಣೈಸ್ತಸ್ಮೈ ನಮಸ್ಸರ್ವದಾ ॥

ಮಾನ್ಯ ಮಂತ್ರಿಗಳೇ, ಕನ್ನಡ ನಾಡಿನ ಈ ಮಂಗಳ ಮಹೋತ್ಸವಕ್ಕೆ ಆಗಮಿಸಿರುವ ಅಣ್ಣ ತಮ್ಮಂದಿರೇ, ಅಕ್ಕ ತಂಗಿಯರೇ, ಕಲ್ಯಾಣದ ಹೆಬ್ಬಾಗಿಲವಾದ ಕಲಬುರಗಿಯಲ್ಲಿ, ಭಕ್ತ ಜನ ಭಾಗ್ಯ ಸಂಭೋದಯನಾದ ಶ್ರೀಶರಣ ಬಸವೇಶ್ವರ ಸನ್ನಿಧಿಯಲ್ಲಿ, ಎರಡನೆಯ ಸಲ ಸೇರಿರುವ ಸಾಹಿತ್ಯ ಸಮ್ಮೇಳನಕ್ಕೆ ತಮ್ಮನ್ನು ಸ್ವಾಗತಿಸಲು ಸಂತೋಷಿಸುತ್ತೇನೆ. ಈ ಸಂತೋಷದೊಡನೆಯೇ ಕಲಬುರಗಿಯಲ್ಲಿಯ ಈ ಮೊದಲು ಕೂಡಿದ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ, ಕನ್ನಡ ತಕುಂತಲೆಯನ್ನು ಸಾಕಿದ ಕಣ್ವಮುನಿ ಶ್ರೀಕಂಠಯ್ಯನವರನ್ನು ಈ ಸಲ ಸ್ವಾಗತಿಸುವ ಸೌಭಾಗ್ಯವಿಲ್ಲವಾಯಿತೆಂಬುವ ದುಃಖವೂ ಉಕ್ಕಿ ಬರುತ್ತಿದೆ. ಮೊನ್ನೆ ತಾನೇ ಭಾರತ ಸರಕಾರದ ಪುಣ್ಯ ಪ್ರಭಾವದಿಂದ ಬಂಧನಗಳ ಬಲಿಯು ಹರಿದು ಸ್ವಾತಂತ್ರ್ಯದ ಸ್ವಚ್ಛ ಸೀತಲ ವಾಯುವಿನಲ್ಲಿ ಉಸಿರಾಡಿಸತೊಡಗಿರುವ ಹೈದರಾಬಾದ ಕರ್ನಾಟಕದ ಕನ್ನಡ ಬಂಧು ಭಗಿನಿಯರನ್ನು ಅಕ್ಕರೆಯಿಂದ ಕಂಡು, ಕಕ್ಕುಲತೆಯಿಂದ ಮಾತನಾಡಿ, ಕನ್ನಡ ಧರ್ಮವನ್ನು ಕಲಿಸಬಂದಿರುವ, ಕನ್ನಡ ಬಾಂಧವ್ಯವನ್ನು ಬೆಳೆಸಬಂದಿರುವ ತಮಗೆ ಕಲಬುರಗಿಯ ಕನ್ನಡಿಗರ ಪರವಾಗಿ ಸಚ್ಚಿನ ನಲ್ಬರವನ್ನು ಕೋರುತ್ತೇನೆ. ಹಾಗೂ ಸ್ವಾಗತ ಸಮಿತಿಯು ಮಾಡಿರುವ ವ್ಯವಸ್ಥೆಗಳಲ್ಲಿ ಅನನುಭವದಿಂದಾಗಲಿ, ಅರಿಯದೆ ಉಳಿದಾಗಲಿ, ಕಂಡುಬರುವ ಕೊರತೆಗಳನ್ನು ಅರಕೆಗಳನ್ನು ತಮ್ಮ ಕನ್ನಡ ಪ್ರೇಮದಿಂದ ತುಂಬಿ, ಸಮ್ಮೇಳನವನ್ನು ಸಫಲಗೊಳಿಸುವಿರಾಗಿ ನೆರೆನಂಬಿದ್ದೇನೆ.

ಸೊನ್ನಲಾಪುರದ ಸಿದ್ಧರಾಮೇಶ್ವರ, ಕಲಬುರಗಿಯ ಶರಣಬಸವೇಶ್ವರ, ಕಲ್ಯಾಣದ ಬಸವೇಶ್ವರ ಈ ಮೂವರು ಮಹಾನುಭಾವರ

ಪವಿತ್ರ ಪಾದರೇಣುವಿನಿಂದ ಪುನೀತವಾದ ಈ ಪ್ರದೇಶಕ್ಕೆ ತಾವಿಂದು ಆಗಮಿಸಿರುವಿರಿ. "ಈ ನಾಡು ಕನ್ನಡದ ಹೊಳೆಗೆ ತಲೆಮೂಡು, ಕಾಶಿ ಕನ್ನಡಿಗನಿಗೆ" ಎಂದು ಶ್ರೀವಾಣಿಯಿಂದ ಹೊರಡಬೇಕಾದರೆ, ಈ ನಾಡಿನ ಇಂದಿನ ಹಿರಿಮೆ ಎಷ್ಟೆಂಬುದು ಸ್ಪಷ್ಟವಾಗುವದು. ಕನ್ನಡ ಕವಿಗಳಿಗೆ ರಾಜಮಾರ್ಗ ತೋರುವ ಕವಿರಾಜ ಮಾರ್ಗದ ಕರ್ತೃವೂ, ಆಗಿನ ಕಾಲದ ಮೂವರು ಮಹಾ ಸಾಮ್ರಾಟರಲ್ಲಿ ಒಬ್ಬನೆಂದೂ, ಅರಬ ವರ್ತಕ ಸುಲೈಮಾನನಿಂದ ಹೊಗಳಲ್ಪಟ್ಟವನೂ ಆದ ಅಮೋಘವರ್ಷ ನೃಪತುಂಗನ ರಾಜಧಾನಿ ಮಾನ್ಯಖೇಟವು ಇದೇ ಜಿಲ್ಹೆಯಲ್ಲಿದೆ. ಅಲ್ಲಿ ಮಧ್ವ ಮತದ ಐದನೆಯ ಆರನೆಯ ಗುರುಗಳಾದ ಅಕ್ಷೋಭ್ಯ ಮತ್ತು ಜಯತೀರ್ಥರ ಸಮಾಧಿಗಳೂ ಇರುವ ಕಾರಣ ಅದು ಮಧ್ವ ಮತಾನುಯಾಯಿಗಳಿಗೂ ಪವಿತ್ರ ಯಾತ್ರಾ ಸ್ಥಾನವಾಗಿದೆ. ಜಗತ್ತಿನ ಕ್ರಾಂತಿ ಕೇಂದ್ರಗಳಿಗೆಲ್ಲ ಕಳಸಪ್ರಾಯವಾದ, ವಿಶ್ವ ಸಾಹಿತ್ಯಕ್ಕೆ ಸೇರಲರ್ಹವಾದ ವಚನ ಸಾಹಿತ್ಯದ ಉಗಮಸ್ಥಾನವಾದ ಬಸವನ ಕಲ್ಯಾಣವೂ ಇದೇ ಜಿಲ್ಹೆಯಲ್ಲಿದೆ. ಈ ಎರಡು ಪಟ್ಟಣಗಳ ಬಗ್ಗೆ ಹೆಚ್ಚು ಹೇಳದೇ ಎರಡು ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿ ಬಿಡುವುದು ಉಚಿತವೆಂದು ತೋರುತ್ತದೆ:

**ಮಳಖೇಡ:** ತತ್ಸೂನುರಾನತನೃಪೋ ನೃಪತುಂಗ ದೇವಃ ।
ಸೋಭೂತ್ ಸ್ವಸೈನ್ಯಭರಭಂಗುರಿತಾಹಿರಾಜಃ ॥
ಯೋ ಮಾನ್ಯಖೇಟಮಮರೇಂದ್ರಪುರೋಪಹಾಸಿ ।
ಗೀರ್ವಾಣಗರ್ವಮಿವ ಖರ್ವಯಿತುಂ ವ್ಯಧತ್ತ ॥
(ವರ್ಧಾ ಮತ್ತು ಕರ್ಹಾಡ ತಾಮ್ರ ಶಾಸನ)

**ಕಲ್ಯಾಣ:** ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣಕಲ್ಪಂ ಪುರಂ
ನೋ ದೃಷ್ಟಃ ಶ್ರುತ ಏವವಾ ಕ್ಷಿತಿಪತಿಃ ಶ್ರೀವಿಕ್ರಮಾರ್ಕೋಪಮಃ।
ವಿಜ್ಞಾನೇಶ್ವರಪಂಡಿತೋ ನ ಭಜತೇ ಕಿಂ ಚಾನ್ಯದನ್ಯೋಪಮಃ ।
ಆಕಲ್ಪಂ ಸ್ಥಿರಮಸ್ತು ಕಲ್ಪಲತಿಕಾಕಲ್ಪಂ ತದೇತತ್ರಯಂ॥
(ವಿಜ್ಞಾನೇಶ್ವರನ ಮಿತಾಕ್ಷರಾ)



ಇದಲ್ಲದೇ ನಾಗಾಯಿಯ ಘಟಿಕಾಸ್ಥಾನ, ರಟಕಲ್ಲಿನ ರೇವಣಸಿದ್ಧೇಶ್ವರ ದೇವಾಲಯ, ಏಕಾಂತ ರಾಮಯ್ಯನ ಆಲಂದಗ್ರಾಮ, ಷಣ್ಮುಖ ಸ್ವಾಮಿಯ ಜೇವರಗಿ, ಕೊಡಗೂಸಿನ ಕೋಳೂರು, ಶ್ರೀಗಣ್ಣನ ಕೆಂಭಾವಿ, ಕಡಕೋಳ ಮಡಿವಾಳಪ್ಪನವರ ತಪೋಭೂಮಿ, ಶಂಕರ ದಾಸಿಮಯ್ಯನ ನವಿಲೆ, ದೇವರ ದಾಸಿಮಯ್ಯನ ಮುದನೂರ, ಸಿದ್ಧೇಶ್ವರನ ಕುಸನೂರ, ಬಾಚಯ್ಯನ ಮಾರಡಗಿ, ಚೆನ್ನಯ್ಯನ ಅಗ್ಗಣಿ, ಬಸವಪ್ಪ ಶರಣರ ಶಹಾಪೂರ, ಶಿವಲಿಂಗಸ್ವಾಮಿಯ ಸಾವಳಗಿ, ಶ್ರೀ. ದತ್ತಗುರು ಮಹಾರಾಜರ ಗಾಣಗಾಪೂರ, ಬಂಕಯ್ಯನ ಮರಟ, ಏಲೇಶಿಕೇತಯ್ಯನ ಏಲೇರಿ, ಬಿಬ್ಬಿ ಬಾಚಯ್ಯನ ಗೊಬ್ಬೂರು, ಮೋಳಿಗೆಯ ಮಾರಯ್ಯ, ಮುಸುಡೆಯ ಚವುಡಯ್ಯ, ನೀರೂರ ನಿಂಬವ್ವ, ಅರಳಗುಂಡಿಗೆಯ ಕೇತಯ್ಯ, ಮೊದಲಾದ ಅಗಣಿತ ಶರಣರ ಅವಿಮುಕ್ತ ಕ್ಷೇತ್ರಗಳು ಕಲಬುರ್ಗಿ ಜಿಲ್ಹೆಯಲ್ಲಿ ಕಂಗೊಳಿಸುತ್ತಿವೆ. ಕಲಬುರ್ಗಿಯೇ ಇತಿಹಾಸಪ್ರಸಿದ್ಧವಾದ ಪಟ್ಟಣ. ಬಹಮನೀ ರಾಜ್ಯದ ರಾಜಧಾನಿಯಾದ ಇದರ ಸುತ್ತುಮುತ್ತಲಿನ ಗತಕಾಲದ ಘನತೆಯ ಗುರುತುಗಳು ಅಲ್ಲಲ್ಲಿ ಕಂಡುಬರುತ್ತಿವೆ. ಹೀಗೆ ಸಾಮ್ರಾಟರ, ಕವಿಗಳ, ತತ್ವದರ್ಶಿಗಳ, ಶರಣರ, ದಾಸರ, ವೀರವನಿತೆಯರ, ವಚನಕಾರ್ತಿಯರ, ಕಲೆಗಾರರ, ಕರ್ಮಯೋಗಿಗಳ ರಂಗಭೂಮಿಯಾಗಿ ಮೆರೆದ ಈ ನಾಡಿಗೆ ಕನ್ನಡ ಸಾಹಿತ್ಯ ಸಮ್ಮೇಳನವು ಬಂದಿರುವುದು ಪೃಥ್ವಿಯನ್ನೆಲ್ಲ ಸುತ್ತಿ, ಹೊರಟ ಸ್ಥಾನಕ್ಕೆ ಮರಳಿ ಬಂದಹಾಗೆ ಆಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಸಾಹಿತ್ಯ ಪ್ರೇಮಿಗಳೇ, ಪ್ರತ್ಯಕ್ಷ ಪ್ರಯೋಜನದ ಅಳತೆಗೋಲಿನಿಂದ ಪ್ರತಿಯೊಂದು ಪದಾರ್ಥದ ಮೌಲ್ಯಮಾಪನ ನಡೆಯುತ್ತಿರುವ ಈ ಯುಗದಲ್ಲಿ ಸಾಹಿತ್ಯ ಸಮ್ಮೇಳನದ ಉಪಯೋಗವನ್ನು ವಿವರಿಸಿ ಹೇಳುವುದು ಕಷ್ಟದ ಕೆಲಸ. ಸ್ವತಂತ್ರ ರಾಷ್ಟ್ರಗಳ ಮಣಿಮಾಲಿಕೆಯಲ್ಲಿ ಭಾರತ ಮಾತೆಯಿಂದು ತನ್ನ ಅಂತಸ್ಥವಾದ, ಅಮಿತ ತೇಜೋರಾಶಿಯಿಂದ ಪರಮ ಪ್ರಕಾಶಮಾನಳಾಗಿ ರಾರಾಜಿಸುತ್ತಿದ್ದಾಳೆ. ಭಾರತೀಯರ ಬಾಳನ್ನು ಬಿಗಿದ ಬೇಡಿಗಳು ಸಿಡಿದು, ನಮ್ಮ ನಚ್ಚಿನ ನಾಯ

ಕರೇ ಇಂದು ಸರಕಾರದ ಸೂತ್ರಧಾರರಾಗಿ ಪ್ರಪಂಚವೇ ಬೆರಗುಬ
ವಂತೆ ಈ ರಾಷ್ಟ್ರದ ರಾಜ್ಯಭಾರವನ್ನು ಸಾಗಿಸುತ್ತ ಇದ್ದಾರೆ.
ಸ್ವಾತಂತ್ರ್ಯದ ಉದ್ದೇಶವೇನು? ಅದೇ ಅದರ ಪರಮ ಪ್ರಯೋ
ನ? ಅಥವಾ ಅಂತಹ ಒಂದು ಧ್ಯೇಯ ಸಿದ್ಧಿಗಾಗಿ ಅದು ಸಾಧ
ಮಾತ್ರವೇ? ನಮ್ಮ ನಾಡಿನ ಎಷ್ಟು ಜನರಿಗೆ ಇದರ ಅರ್ಥವಾಗಿದೆ
ನಮ್ಮಲ್ಲಿ ಸುಪ್ತವಾಗಿರುವ ಶಕ್ತಿಗಳನ್ನು ಅದು ಚೇತನಗೊಳಿಸಿ ಅರಳಿ
ದಿದ್ದರೆ, ಜ್ಞಾನ ಯಜ್ಞಕ್ಕೆ ದಾರಿ ಮಾಡದಿದ್ದರೆ, ಪ್ರತಿಯೊಬ್ಬರ ಉತ್ತ
ಮತ್ವದ ವಿಕಾಸಕ್ಕೆ ಅವಕಾಶ ಕಲ್ಪಿಸದಿದ್ದರೆ, ಪುರುಷಃ ನೃಷು! ನರಸ
ಳಗಿನ ಪುರುಷನ ಪ್ರಕಾಶಕ್ಕೆ, ಪ್ರಚೋದನೆಯನ್ನೀಯದಿದ್ದರೆ, ಉನ್ನತ
ವಿಚಾರ, ಉಜ್ವಲ ಆಚಾರ ಹಾಗೂ ಮಹೋನ್ನತ ಸಂಸ್ಕೃತಿಗಳ ನೇರ
ವಾದ ದಾರಿಯ ಕಡೆಗೆ ಕರವಿಡಿದು ಕರೆದೊಯ್ಯದಿದ್ದರೆ, ಅದು ಅರ್ಥ
ರಹಿತವಾಗುವದಿಲ್ಲವೇ? ಒಂದು ವರ್ಷದ ನಮ್ಮ ಸ್ವಾತಂತ್ರ್ಯಾನುಭವ
ನಮಗೆ ಏನನ್ನು ಹೇಳುತ್ತದೆ? ನಮ್ಮ ಅಂತಃಸತ್ವವನ್ನು ಅರಳಿಸಿ, ಸಣ್ಣ
ತನವನ್ನು ಹೋಗಲಾಡಿಸಿ, "ಭೂಮಾತ್ಸುಖಂ ನಾಲ್ಪೇ ಸುಖಮಸ್ತಿ।
ಭೂಮೈವ ಸುಖಂ" ಎಂದು ದೊಡ್ಡತನದ ಸಾಧನೆಗಾಗಿ ನಮ್ಮನ್ನು
ಪ್ರೇರೇಪಿಸುವದಕ್ಕೆ ಪ್ರತಿಯಾಗಿ, ನಮ್ಮಲ್ಲಿ, ಸಣ್ಣಪುಟ್ಟ ಸ್ವಾರ್ಥಗಳ,
ಚಿಕ್ಕ ಪುಟ್ಟ ವಿಷಯಗಳಿಗಾಗಿ, ಕಡಿದಾಟಗಳ, ಬಡಿದಾಟಗಳ, ಅಲ್ಪ
ಕಾರಣಗಳಿಗಾಗಿ ಹಿರಿಯ ಗುರಿಯನ್ನು ಮರೆಯುವ ಅದೂರದೃಷ್ಟಿಯ,
ಅಂಧತನದ, ಅಲ್ಪ ಸುಖಕ್ಕಾಗಿ ರಾಷ್ಟ್ರ ಹಿತವನ್ನು ಕೂಡ ಕಡೆಗಣಿ
ಸುವ ಕೀಳುತನದ, ಅರಿವಿನ ಅಳುತನದ, ವಿಷವಾಯುವನ್ನು ಪಸರಿಸು
ತ್ತಲಿದೆ. ಆಶೆ ರೋಷಗಳು ಕೆರಳಿವೆ, ಹೊಸ ಪ್ರಲೋಭನೆಗಳು ಪುಟ
ಗೊಳ್ಳತೊಡಗಿವೆ, ಹೊಸ ಹಗೆಗಳು ಹೊರಗೂ ಒಳಗೂ ಹುಟ್ಟಿ
ಹೊಂಚು ಹಾಕುತ್ತಲಿದ್ದಾರೆ, ಸಂಚು ನಡೆಸಿದ್ದಾರೆ; ಮೊದಲಿಗಿಂತಲೂ
ಹೆಚ್ಚು ಕಷ್ಟ ನಷ್ಟಗಳಿಗೆ ಸಿಕ್ಕಿ ಮೂಕ ಜನತೆ ಮೌನವಾಗಿ ಶೋಕಿಸು
ತ್ತಲಿದೆ. ಆವುದೋ ಅಪೂರ್ಣತೆ, ಅತೃಪ್ತತೆ, ಅಸಂತೋಷ,
ಔದಾಸೀನ್ಯ ಆವರಿಸಿಬಿಟ್ಟಿದೆ. ಹೀಗೆಯೇ ಸಾಗಿದರೆ ನಮ್ಮ ನಾಳಿನ
ಭಾರತದ ಭವಿತವ್ಯ ಏನಾಗಬಹುದೆಂಬುದರ ಬಗ್ಗೆ ಭಯಾನಕ ಕಲ್ಪನೆ



ಗಳು ಬರತೊಡಗಿವೆ. ಸಾಹಿತಿಯು ಇವೆಲ್ಲ ಆರಕೆಗಳನ್ನೂ, ದೋಷ
ಗಳನ್ನೂ, ತನ್ನ ಸಂಜೀವಿನೀ ಶಕ್ತಿಯಿಂದ ಕಣ್ಮುಚ್ಚಿ ಕಣ್ತೆರೆಯುವ
ಸ್ವರಲ್ಲಿ, ಕಳೆದು ಬಿಡುವನೆಂದು ಎದೆಯುಬ್ಬಿಸಿ ಹೊರಟಿಲ್ಲ. ಅವನ
ಕೆಲಸ ಸಮಾಜದ ಪುರುಷಾರ್ಥ ಸಾಧಯ ಪ್ರಯತ್ನಗಳಿಗೆ, ಸಂಸ್ಕೃತ
ತಿಯ ಒರೆಗಲ್ಲು ಹಚ್ಚುವುದು, ಆರ್ಥಿಕ ರಾಜಕೀಯ ಮೇಲ್ಮನೆಗಳು
ಕುಸಿಯದಂತೆ ಅವುಗಳಿಗೆ ಸಂಸ್ಕೃತಿಯ ಬಲವಾದ ನೆಲೆಗಟ್ಟನ್ನು
ನಿರ್ಮಿಸುವುದು. ನಾಡಿಗರ ವಿಚಾರಸರಣಿಯಲ್ಲಿರುವ ಅಜ್ಞತೆಯನ್ನು
ಅಂಧತೆಯನ್ನೂ, ಅಸಂಬದ್ಧತೆಯನ್ನೂ, ಅಪ್ರಾಮಾಣಿಕತೆಯನ್ನೂ,
ಶೈಥಿಲ್ಯವನ್ನೂ, ಅತುಭವನ್ನೂ, ನಿರ್ದಾಕ್ಷಿಣ್ಯವಾಗಿ ನಿದರ್ಶಿಸಿ, ಅವರಿಗೆ
ಸತ್ಯಶಿವಸುಂದರನ ಸಾಕ್ಷಾತ್ಕಾರ ಮಾಡಿಸಿ, ಇಚ್ಛಾ ಜ್ಞಾನಕ್ರಿಯಾ
ಶಕ್ತಿಗಳ ದರ್ಶನ ಸ್ಪರ್ಶನಗಳನ್ನು ಮಾಡಿಸಿ, ಸುಜ್ಞಾನ ಸತ್ಕರ್ಮಗಳ
ಸಮನ್ವಯಕ್ಕೆ ಸಿದ್ಧರನ್ನಾಗಿ ಮಾಡುವುದಾಗಿದೆ. ಸಾಹಿತ್ಯವು, ಸಾಮ್ಯಿಕ,
ಸಾರ್ವಕಾಲಿಕ, ಸಾರ್ವದೇಶಿಕ, ವ್ಯಕ್ತಿಯುಗ ಪ್ರಭಾವಗಳ, ರಸಾಯನ;
ತಾತ್ಕಾಲ ಅನಂತ ಕಾಲಗಳನ್ನು ಸಂಧಿಸುವ ಸೇತುವೆ; ವಿಜ್ಞಾನದ ಶಕ್ತಿ
ತತ್ವಜ್ಞಾನದ ಶಿವಕ್ಕೆ ಸಂಗಮಸ್ಥಾನ; ರಮಣೀಯತೆ ಪ್ರಯೋಜಕತೆ
ಗಳ ಮಧುರ ಮಿಲನ; ಮಾನವ ಪ್ರಕೃತಿ ವಿಶ್ವಪ್ರಕೃತಿಗಳ ಚಿರಂತನ
ಲೀಲಾವಿನ್ಯಾಸ; ಬುದ್ಧಿ ಹೃದಯಗಳ ವಿದ್ಯುದಾಲಿಂಗನ; ನಾಡಿನ ಆತ್ಮ
ಚರಿತ್ರೆ; ಜನಾಂಗನಿರ್ಮಾಣದ ನಿತ್ಯನೂತನಶಕ್ತಿ; ಸಾಹಿತಿ ಜಗತ್ತಿನ
ಪ್ರಚ್ಛನ್ನ ಶಾಸನಕಾರ. ಅಂದಮೇಲೆ ಸ್ವಾತಂತ್ರ್ಯ ಪ್ರಾಪ್ತಿಯ ತರು
ವಾಯ ಸಾಹಿತಿಯ ಹೊಣೆ ಹೆಚ್ಚಿದೆ. ಸಾಹಿತ್ಯದ ಆವಶ್ಯಕತೆ ಅಧಿಕ
ವಾಗಿದೆ. ಸಾಹಿತ್ಯ ಸಮ್ಮೇಳನಗಳ ಪ್ರಯೋಜನವೂ ಬಹು ಮುಖವಾ
ಬೆಳೆದಿದೆ. ಇಂದು ಭಾರತದಲ್ಲೆಲ್ಲ ಬಲವಾದ ಸಾಂಸ್ಕೃತಿಕ ಆಂದೋ
ಲನವು ಅವ್ಯಾಹತವಾಗಿ ನಡೆಯದಿದ್ದರೆ ನಮ್ಮ ಸ್ವತಂತ್ರತೆಯು ಅರಾಜ
ಕತೆ, ಉಚ್ಛೃಂಖಲತೆಯಲ್ಲಿ ಪರ್ಯವಸಾನವನ್ನು ಹೊಂದುವುದರಲ್ಲಾವ
ಸಂದೇಹವೂ ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ಈ ಹೆಚ್ಚಿನ
ಹೊಣೆಗಾರಿಕೆಯನ್ನು ವಹಿಸಬೇಕಾಗಿದೆ. ಕನ್ನಡಿಗರ ವಿಚಾರ ಶಕ್ತಿಯ
ವಿಶ್ವಸ್ತಿಕೆಯನ್ನು ವಹಿಸಬೇಕಾಗಿದೆ. ಕನ್ನಡಿಗರ ಧೀಶಕ್ತಿಯ ಪ್ರತಿ

ನಿಧಿಯಾಗಬೇಕಾಗಿದೆ. ಸಾಹಿತ್ಯ ಪರಿಷತ್ತಿನ ಸರಸ್ವತೀ ಮಂದಿರದಿಂದ ಸಂಸ್ಕೃತಿಯ ಸೆಲೆಗಳು ಹೊರಹೊಮ್ಮಿ ಜನದ ಮನದ ಮೈಲಿಗೆಯನ್ನು ಕಳೆದು, ನಾಡ ಬಾಳಿನ ಕಾಳಿಮೆಯನ್ನು ಕಳೆದು, ಹಿಗ್ಗಿನ ಬುಗ್ಗೆಯಾಗಿ, ಚಲುವಿನ ಕಾರಂಜಿಯಾಗಿ, ಒಲವಿನ ಒರತೆಯಾಗಿ, ಎಲ್ಲೆಡೆಯಲ್ಲಿಯೂ ಜೀವ ರಥೋತ್ಸವದ ರಮ್ಯ ಚಿತ್ರಗಳು ಕಂಗೊಳಿಸುವಂತೆ ಮಾಡಬೇಕಾಗಿದೆ.

ಸಾಂಸ್ಕೃತಿಕ ಆಂದೋಲನವೆಂದರೇನು ? ಇಂದಿನ ಸಂಸ್ಕೃತಿಯೇ ಸಂದೇಹ ಸಂದೋಹವಾಗಿದೆ. ಅವುದು ಸಟೆ ಅವುದು ದಿಟ ಯಾರು ನಿರ್ಣಯಿಸಬೇಕು ?

"Who can decide when doctors disagree ?"
Wandering between two worlds, one dead,
The other powerless to be born,
With no-where yet to rest my head
Like these, on earth I wait for lorn.

ಈ ಸಂದಿಗ್ಧತೆ, ಸಂಕರ ಸಂಸೃಷ್ಟಿ, ಸಂತಯ ಕಲ್ಲೋಲ, ಅನಿಶ್ಚಿತತೆ, ಅಸಹಾಯತೆಗಳಿಗೆ ಸಿಕ್ಕಿ, ದಿಕ್ಕುಗಾಣದೆ, ದಿಙ್ಮೂಢವಾಗಿದೆ ಜಗದ ಜನತೆ. ಶ್ರೀ ಅರವಿಂದರು ವರ್ಣಿಸಿಲ್ಲವೇ ?

All that is there is a chaos of clashing mental ideas, urges of individual and collective physical want and need, vital claims and desires, impulses of an ignorant life-push, hungers and calls for life satisfaction of individuals, classes, nations, a rich fungus of political and social and economic nostrums and nations, a hurtling medley of slogans and pan aceas for which men are ready to oppress and be oppressed, to kill and be killed, to impose them somehow or other by the immense and too formidable means places at his disposal, in the belief that this is his way out to something ideal."



ಈ ನಿರಾಶಾಜನಕವಾದ ಜಾಗತಿಕ ಪರಿಸ್ಥಿತಿಯಲ್ಲಿಯೂ ಮನುಷ್ಯನ ಮಾನವತೆಯಲ್ಲಿ ಅಚಲ ವಿಶ್ವಾಸವನ್ನಿಟ್ಟು, ಅಖಂಡ ಆಶಾವಾದಿಗಳಾಗಿ, ಹೀಗೆ ಮಂಗಳ ಗೀತೆಯನ್ನು ಹಾಡುವ ಕವಿಗಳೂ ಇದ್ದಾರೆ.

The sun's ray that was waiting at the door out side
falls on the head of the child.
The poet strikes his lute and sings out :
"Victory to Man, the new-born, the ever-living."

—*Ravindra Nath Tagore*

ಈ ಅನಂತ ಆಶಾವಾದದ ಅಸ್ತಿಭಾರದ ಮೇಲೆ ಸಂಸ್ಕೃತಿಯ ಸುಂದರ ಮಂದಿರವನ್ನು ಕಟ್ಟಬೇಕಾಗಿದೆ. ಮಾನವನು ದಾನವನಾದರೂ ಕೂಡ ದೇವನು ಇನ್ನೂ ಮಾನವನ ಬಗ್ಗೆ ಬೇಸತ್ತಿಲ್ಲ. ಜಗದಲ್ಲಿ ಹೊಸದಾಗಿ ಹುಟ್ಟುವ ಪ್ರತಿಯೊಂದು ಕೂಸೂ ಇದೇ ಸಂದೇಶವನ್ನು ಸಾರುತ್ತದೆಯೆಂದು ಕವೀಂದ್ರ ರವೀಂದ್ರರು ಹಾಡಿದ್ದಾರೆ. ಕಾರಣ ಸಾಹಿತಿಯ ಪ್ರಥಮ ಕರ್ತವ್ಯ ನಿರಾಶೆಗೊಂಡ ನಾಡಿಗರಿಗೆ ಆಸೆಯ ಅಮೃತಪಾನ ಮಾಡಿಸುವದು, ನಂಬುಗೆಯ ಆಸರವನ್ನೀಯುವುದು, ಬದುಕು ಬಾಳಲು ಯೋಗ್ಯವಿದೆ ಎಂಬುದನ್ನು ತನ್ನ ರಸವಾಣಿಯಿಂದು ಬಣ್ಣನೆಯ ಬಂಣದಿಂದ ತಿಳಿಸಿ ಕೊಡುವುದು. ಈಗಿದ್ದ ಬಾಳನ್ನು ಇನ್ನೂ ಒಳ್ಳೆಯದನ್ನಾಗಿ ಮಾಡಲು ಬರುವುದೆಂಬ ಭರವಸೆಯನ್ನು ಕೊಡುವುದರ ಜೊತೆಗೆ ಬಾಳಿನ ಅರಕೆಗಳನ್ನು ಸರಿಪಡಿಸಿಕೊಳ್ಳುವುದು ಹೇಗೆ? ತುಂಬು ಬಾಳನ್ನು ಅಳವಡಿಸಿಕೊಳ್ಳುವುದು ಹೇಗೆ ? ಗುರಿಗೆಟ್ಟ ಬಾಳನ್ನು ಗುರಿಗೂಡಿಸಿಕೊಳ್ಳುವುದು ಹೇಗೆ? ಇತ್ಯಾದಿ ವಿಷಯಗಳನ್ನು ವಿಶದೀಕರಿಸಬೇಕು.

ಇದರ ಮುಂದಿನ ಹೆಜ್ಜೆ ಮುಕ್ತಜೀವನದಿಂದ ರಸಿಕ ಜೀವನದ ಕಡೆಗೆ. ಇದಕ್ಕೆ ಸಹಾಯಕವಾದ ಸಾಧನಗಳು ಮೂರು: ೧) ಸೌಂದರ್ಯ ಶೋಧನೆ. ೨) ಶಿವನ ಆರಾಧನೆ. ೩) ಹೃದಯ ಪರಿವರ್ತನೆ. ರಸಿಕ ನಾಡಿದ ಮಾತು ಶಶಿಯುದಿಸಿ ಬಂದಂತೆ, ರಸಿಕತನ ಬಾರದೆ ಪಶುತನ

ಹೋಗದು. ರಸಕ್ಕೆ ತಕ್ಕ ರೂಪ, ರೂಪಕ್ಕೆ ತಕ್ಕ ರುಚಿ, ಈ ರಸರೂಪರುಚಿಗಳ ಸಾರವನ್ನು ಹೀರಲು ನಮ್ಮ ಜನ ಸಮರ್ಥವಾಗುವಂತೆ ಸಾಹಿತಿಯು ಅವರಿಗೆ ಇವುಗಳ ಅರಿವನ್ನುಂಟು ಮಾಡಿಕೊಡಬೇಕು. ರಾಜಕಾರಣಿಯ ಕಂಣಲ್ಲಿ, ಅರ್ಥ ಶಾಸ್ತ್ರಜ್ಞನ ದೃಷ್ಟಿಯಲ್ಲಿ, ವಿಜ್ಞಾನಿಯ ನೋಟದಲ್ಲಿ ನಮ್ಮ ಆದರ್ಶ ಸಮಾಜದ ಕಲ್ಪನೆ ಏನೇ ಇರಲಿ ಕವಿಕಲ್ಪನೆ ಮಾತ್ರ ಸ್ಪಷ್ಟ. "ಚಾಗದ ಭೋಗದ-ಕ್ಕರದ, ಗೇಯದ ಗೊಟ್ಟಿಯಲಿಂಪಿನಿಂಪುಗಳಾಗರಮಾದ ಮಾನಿಸರೆ ಮಾನಿಸರ್" ಎಂದು ಪಂಪನ ತೀರ್ಪು. ಇಂಥ ಮಾನವ ಸಮಾಜದ ನಿರ್ಮಾಣವೇ ಕವಿಯ ಕನಸಿನ ಲೋಕ. ಇದಕ್ಕಾಗಿ ನಾಡಿನಲ್ಲಿ ವಿದ್ಯಾನಟಿಯ ನಾಟ್ಯ ನಡೆಯಬೇಕೆಂದು ಅವನು ಹೇಳುತ್ತಾನೆ. ಆಕೆಯ ರೂಪ ರಾಶಿಯನ್ನು ನಾಗಚಂದ್ರನ ವಾಣಿಯಲ್ಲಿಯೇ ಕೇಳಿ:

ಪರಬ್ರಹ್ಮ ಶರೀರಪುಷ್ಟಿ; ಜನತಾಂತರ್ದೃಷ್ಟಿ; ಕೈವಲ್ಯ ಬೋ- |
ಧರಮಾ ಮೌಕ್ತಿಕ ಹಾರಯಷ್ಟಿ; ಕವಿತಾವಲ್ಲೀ ಸುಧಾವೃಷ್ಟಿ; ಸ- ||
ರ್ಗರ ಸೋತ್ಪಾದ ನವೀನಸೃಷ್ಟಿ; ಬುಧಹರ್ಷಾಕೃಷ್ಟಿ; ಸರ್ವಾಂಗ ಸುಂ- |
ದರಿ ವಿದ್ಯಾ ನಟಿ ನಾಟಕಂ ನಲಿಗೆ ಮತ್ಕಾವ್ಯಸ್ಥಲೀರಂಗದೊಳ್ || "

ಮನುಷ್ಯನನ್ನು ಪಶುಗಳಿಂದ ಪ್ರತ್ಯೇಕಿಸುವ ವಸ್ತುಗಳು ಮೂರು: ೧ ವಿಮರ್ಶಕ ಬುದ್ಧಿ. ೨ ನೈತಿಕ ನೋಟ, ಹಾಗೂ ೩ ಸೌಂದರ್ಯಾಭಿಲಾಷೆ. ಮೊದಲನೆಯದು. ನಮ್ಮ ಸಾಂಸ್ಕೃತಿಕ ಪರಂಪರೆಗೆ ಆಧಾರವಾದ ಸರ್ವ ಜ್ಞಾನರಾಶಿಗೆ ಆಶ್ರಯಸ್ಥಾನವಾದರೆ ಎರಡನೆಯದು ನಮ್ಮ ಒಳಿತು ಕೆಡಕುಗಳ, ಬೇಕು ಬೇಡಗಳ, ಕರ್ತವ್ಯ ಹೊಣೆಗಾರಿಕೆಗಳ, ನಿಷ್ಕರ್ಷೆಗೆ ಸಹಕಾರಿ. ಮೂರನೆಯದು ಕಲೆಯ ನೆಲೆ. ಇವೆಲ್ಲವುಗಳನ್ನೂ ಏಕೀಕರಿಸಿ ಸುಂದರತರ ಸಾಹಿತ್ಯ ಸೃಷ್ಟಿಯಾಗಿ ಸಂಸ್ಕೃತಿಯ ವಾಹನವಾಗುತ್ತದೆ.

ಇದು ಜೀವನಕ್ಕೇ ಜೀವ ಕಳೆ ಕೊಡಬಲ್ಲ ಸಂಜೀವಿನಿ, ಪ್ರಾಣಸ್ರೋತಸ್ವಿನಿ; ರಸಗಂಗೆಯ ನಿರ್ಮಲ ನಿರ್ಝರ; ಚೇತನದ ಚಲುವು, ವರ್ತಮಾನದ ಶಿಲ್ಪಿ, ಭವಿತವ್ಯದ ಪ್ರವಾದಿ.



"For beauty in art and literature affects our lives, making us more sensitive to and considerate of the feelings of others, helping us to find more interest in life precisely in so for as we bring to it minds which are fuller and more critical, and enabling us to see in the world more beauty, more passion, more scope for our sympathy and our understanding than we saw before."

—*C. E. M. Joad*

ಎಂತಲೇ ಸಾಹಿತ್ಯವು ಸಂಸ್ಕೃತಿಯ ಸಜೀವತೆಗೆ ಸಾಕ್ಷಿ ಎಂದು ನುಡಿಯುವುದು. ಉಜ್ವಲ ವಿಚಾರಗಳ ಸಂಚಯವು ಸಂಭವಿಸಿದಲ್ಲೆಲ್ಲ ಸಂಸ್ಕೃತಿಯ ಪುಣ್ಯ ಕ್ಷೇತ್ರಗಳ ಪ್ರಾದುರ್ಭಾವವಾಗುತ್ತ ಬಂದಿದೆ. ಆ ಉಜ್ವಲ ವಿಚಾರಗಳನ್ನು ಶಬ್ದಗಳಲ್ಲಿ ಸೆರೆ ಹಿಡಿದು ಸಾಹಿತ್ಯವು ಸಂಸ್ಕೃತಿಯ ರಕ್ಷಾ ಕವಚವಾಗುತ್ತ ಬಂದಿದೆ. ಇಂಥ ಸಾಹಿತ್ಯವು ಮನೆಮನೆಗೆ ಮುಟ್ಟಿ, ಜನದ ಮನವೇ ಗಂಗೆ, ಮನೆಯೇ ಕಾಶಿಯಾಗುವಂತೆಸಗುವುದೆ ಸಾಂಸ್ಕೃತಿಕ ಆಂದೋಲನ. ಸ್ವತಂತ್ರ ಭಾರತವನ್ನು ಕಂಡಾಯಿತು. ಸ್ವತಂತ್ರ ಭಾರತೀಯರನ್ನೂ ಕಾಣಬೇಕಾಗಿದೆ ಎಂದು ಭಾರತದ ರಾಜಕೀಯ ಪರಿಷತ್ತಿನ ವೇದಿಕೆಯಿಂದ ಡಾ. ಶರ್ಮರು ನುಡಿದಿದ್ದಾರೆ. ಭಾರತದಲ್ಲಿನ್ನು ಬರಲಿರುವ ಯುಗವು ಕ್ರಾಂತದರ್ಶಿಗಳಾದ ಕವಿಗಳ, ಕಲೆಗಾರರ, ಹಾಗೂ ತತ್ವಜ್ಞರ ಯುಗವೆಂದು ರಾಷ್ಟ್ರಪತಿ ಪಟ್ಟಾಭಿಯವರು ಸಾರಿದ್ದಾರೆ. ಸಂಸ್ಕೃತಿಯ ಆರಾಧನೆ ನಡೆಯದ ಸ್ವಾತಂತ್ರ್ಯ ಮಂದಿರವು ಮೂರ್ತಿಯೇ ಇಲ್ಲದ ವಿಜಯನಗರದ ವಿಠ್ಠಲರಾಯನ ಗುಡಿಯಂತೆ ಶೂನ್ಯವಾದುದು. ಆ ಸಂಸ್ಕೃತಿ ಪ್ರಸರಣ ಪವಿತ್ರ ಕಾರ್ಯದಲ್ಲಿ ನಾವೆಲ್ಲ ನಮ್ಮ ಅಲ್ಪ ಸೇವೆಯನ್ನರ್ಪಿಸಿ ಕೃತಕೃತ್ಯರಾಗೋಣ.

ಈ ಕಾರ್ಯವು ನಮ್ಮಿಂದಾಗಬೇಕಾದರೆ ಮೊದಲು ನಮ್ಮ ಬಾಳು ದೊಡ್ಡದಾಗಬೇಕು. ಎಲ್ಲ ಸಾಹಿತ್ಯದ ಉಗಮ ನಮ್ಮ ಬುದ್ಧಿ ಸ್ಫೂರ್ತಿ ಭಾವೋನ್ನತಿಗಳಲ್ಲಿ. ಇದಕ್ಕೆ ಆತ್ಮಾನುಭೂತಿಯೇ ಆಧಾರ. ಆತ್ಮಾನುಭೂತಿಯೇ ಆತ್ಮ ಸೌಂದರ್ಯದ ಬೀಗದ ಕೈ. ಕಾರಣ ಸರ್ವ ಪ್ರಗತಿಗೂ ಸ್ವಾತ್ಮಾನುಭವನೇ ಮೂಲ.

ತದೇತತ್ ಪ್ರೇಯಃ ಪುತ್ರಾತ್,
ಪ್ರೇಯೋವಿತ್ತಾತ್ ಪ್ರೇಯೋಽನ್ಯಸ್ಮಾತ್,
ಸರ್ವಸ್ಮಾದಂತರತರಮ್ ಯದಯಮಾತ್ಮಾ

ಇದನ್ನೇ ಅವಲಂಬಿಸಿ ಈ ಮಹತ್ಕಾರ್ಯವನ್ನು ಸಾಧಿಸಬೇಕಾಗಿದೆ.

ಯಸ್ಯಾತ್ಮಾ ವಿರತಃ ಪಾಪಾತ್ ಕಲ್ಯಾಣೇಚ ನಿವೇಶಿತಃ
ತೇನ ಸರ್ವಮಿದಂ ಬುದ್ಧಂ ಪ್ರಕೃತಿರ್ ವಿಕೃತಿಶ್ಚಯಾ

ಇದೇ ಮಾತನ್ನೇ ಭಾರತದ ಭಾಗ್ಯವಿಧಾತ ಬಾಪೂಜಿಯವರು ಮಾರ್ಮಿಕವಾಗಿ, ಮನೋಜ್ಞವಾಗಿ ಒಡೆನುಡಿದಿದ್ದಾರೆ.

Life is greater than all art. I would go even further and declare that the man whose life comes nearest to perfection is the greatest artist; for what is art without the sure foundation and frame work of a noble life?

ಮೊದಲು ನಮ್ಮ ಜೀವನವನ್ನು ಉದಾತ್ತಗೊಳಿಸಿಕೊಳ್ಳೋಣ, ವ್ಯಕ್ತಿತ್ವವನ್ನು ಅರಳಿಸಿಕೊಳ್ಳೋಣ. ಅನಂತರ ವ್ಯಕ್ತಿತ್ವದ ಲೀಲೆಯಾದ ಸತ್ವಶಾಲಿ ಸಾಹಿತ್ಯವನ್ನು ಸೃಷ್ಟಿಸಿ ಸಂಸ್ಕೃತಿ ಪ್ರಸರಣದ ಪುಣ್ಯಕಾರವನ್ನು ಪೂರ್ಣಗೊಳಿಸೋಣ.

ಲೋಕ ಶಿಕ್ಷಣ ಹಾಗೂ ಸಂಸ್ಕೃತಿ ಪ್ರಸರಣದ ಕಾರ್ಯವು ಕನ್ನಡಿಗರಿಗೆ ಹೊಸದೇನೂ ಅಲ್ಲ. ಅನುಭವಮಂಟಪ, ನಾಗಾವಿ, ಬಳ್ಳಿಗಾವೆ, ಶ್ರವಣಬೆಳಗುಳ, ವಿಜಯನಗರ, ಉಲ್ಲೂರು, ಬಾದಾಮಿ ಪಟ್ಟದಕಲ್ಲು, ಹಳೆಯಬೀಡು, ಬೇಲೂರು, ಹೀಗೆ ಒಂದಲ್ಲ ಎರಡಲ್ಲ ಎತ್ತೆತ್ತ ನೋಡಿದೊಡತ್ತತ್ತ ಕನ್ನಡಿಗರ ಸಾಹಿತ್ಯದ, ಸಂಸ್ಕೃತಿಯ, ಕಲೆಯ ಕೇಂದ್ರಗಳು ಕಂಗೊಳಿಸುತ್ತಿವೆ. ಆ ಉಜ್ವಲ ಪರಂಪರೆಯನ್ನು ಮುಂದುವರಿಸಲು ಮುಂದೆ ಬಂದಿರುವ ನಿಮಗೆ ನಲ್ಬರವ ಕೋರುವ ಸುಯೋಗ ಸಂಪ್ರಾಪ್ತವಾದುದಕ್ಕಾಗಿ ತಾಯಿ ಭುವನೇಶ್ವರಿಗೆ ತಲೆಬಾಗುವೆ.



ಇಂಥ ಮಹತ್ವದ ಅಧಿವೇಶನಕ್ಕೆ ಅಧ್ಯಕ್ಷರಾಗಿ ಅನುಭವದ ಪರಿಪಕ್ವತೆಯಿಂದಲೂ, ಅಭ್ಯಾಸದ ಸಂಪನ್ನತೆಯಿಂದಲೂ ವಾಙ್ಮಯ ಕೃಷಿಯಿಂದಲೂ ಗಂಡು ಕವಿ ಸರ್ವಜ್ಞನ ವಚನಗಳ ಸಂಶೋಧನದ ಸಾಧನೆಯಿಂದಲೂ, ಸಾಹಿತ್ಯ ಚಿಂತನೆಯ ತುಂಬು ಜೀವನದಿಂದಲೂ, ಕನ್ನಡಿಗರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿರುವ ಶ್ರೀಮಾನ್ ಉತ್ತಂಗಿ ಚನ್ನಪ್ಪನವರು ದೊರೆತಿರುವುದು ನಮ್ಮ ಭಾಗ್ಯ. ಅನುಭವ ಮಂಟಪದ ಬಗ್ಗೆ ಮೊಟ್ಟಮೊದಲು ಗ್ರಂಥ ಬರೆದು ಅದನ್ನು ಪ್ರಕಾಶಕ್ಕೆ ತಂದ ಉತ್ತಂಗಿಯವರೇ ಇಂದು ಅನುಭವ ಮಂಟಪದ ಅಭಿಧಾನದಿಂದಲೇ ಶೋಭಿಸುತ್ತಿರುವ ಈ ಸಮ್ಮೇಲನದ ಮಂಟಪದಲ್ಲಿ ಅಧ್ಯಕ್ಷಪದಾರೂಢರಾಗಿರುವುದು ಅಪೂರ್ವ ಯೋಗವಲ್ಲವೇ? ಮೈ ಮುಪ್ಪಾಗಿದ್ದರೂ ಮನ ಮುಪ್ಪಾಗಿಲ್ಲ ಇವರಿಗೆ. ಇಂತಹ ಇಳಿವಯಸ್ಸಿನಲ್ಲಿಯೂ ಅವರು ಎಳೆಯರನ್ನೂ ಮೀರಿಸಿ ಕಾರ್ಯ ಮಾಡುತ್ತಲಿದ್ದಾರೆ. ಅವರ ನೇತೃತ್ವದಲ್ಲಿ ಸಮ್ಮೇಳನದ ಸಕಲ ಕಾರ್ಯಗಳೂ ಸುಗಮವಾಗಿ, ಸಾಂಗವಾಗಿ, ಸಫಲತೆಯನ್ನೈದುವವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಸಮ್ಮೇಳನದ ಉದ್ಘಾಟನವನ್ನು ತಮ್ಮ ಅಮೃತ ವಾಣಿಯಿಂದ ನೆರವೇರಿಸಿ ಕೊಟ್ಟ ಮಾನ್ಯ ಮಂತ್ರಿಗಳಾದ ರಾಜಸೇವಾಪ್ರಸಕ್ತ ಶ್ರೀ ಎಸ್. ಶೇಷಾದ್ರಿಯವರ ಮಹೋಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು. ಈವರೆಗೆ ನಮ್ಮ Election Commissioner ಆಗಿದ್ದು ತಮ್ಮ ಬುದ್ಧಿಮತ್ತೆಯಿಂದ, ಆಡಳಿತದ ಅನುಭವದಿಂದ, ನಿಷ್ಕಳಂಕ ಚಾರಿತ್ರ್ಯದಿಂದ, ಕರ್ತವ್ಯದಕ್ಷತೆಯಿಂದ, ಜನಪ್ರಿಯತೆಯಿಂದ, ಮಂತ್ರಿ ಪದವಿಗೇರಿದ ಮಾನ್ಯ ಶೇಷಾದ್ರಿಯವರಿಗೆ ಇದಕ್ಕೂ ಉನ್ನತ ಪದವಿ ಲಭಿಸಲೆಂದೂ ಅವರಿಂದ ಪ್ರಜಾ ಕೋಟಿಗೆ ಚಿರಕಾಲ ಕಲ್ಯಾಣವಾಗಲೆಂದೂ ಪರಮಾತ್ಮನನ್ನು ಪ್ರಾರ್ಥಿಸದಿರಲಾರೆನು.

ಈ ಎಲ್ಲ ಕಾರ್ಯಗಳೂ ಯಾರ ಮಹಾದಾಶ್ರಯದಲ್ಲಿ ಮಹಾಪೋಷಕತ್ವದಲ್ಲಿ ನಡೆದಿವೆಯೋ ಆ ಶರಣ ಸಂತಾನರಾದ ಪೂಜ್ಯ ದೊಡ್ಡಪ್ಪಾ ಅಪ್ಪಾ ಶ್ರೀ ಶರಣ ಬಸವೇಶ್ವರ ಸಂಸ್ಥಾನ ಅವರ ಅಡಿದಾ

ವರಿಗಳಿಗೆ ಭಕ್ತಿಯ ಪುಷ್ಪಾಂಜಲಿಗಳನ್ನು ಸಮರ್ಪಿಸಿ ಈ ಭರತ ವಾಕ್ಯ ದೊಡನೆ ನನ್ನ ಮಾತು ಮುಗಿಸುತ್ತೇನೆ.

"ಸಬ್ಬೇ ಸತ್ತಾ ಸುಖಿತಾ ಹೋಂತು ಅವೇರಾ ಹೋಂತು
ಅಬ್ಯಾಪಜ್ಜೋ ಹೋಂತು ಸುಖೀ ಅತ್ತಾನಂ ಪರಿಹರಂತು.
ಸಬ್ಬೇ ಸತ್ತಾ ದುಃಖಾ ಪಮುಂಚಂತು— ಸಬ್ಬೇ ಸತ್ತಾ ಮಾ
ಯಥಾ ಲಬ್ಧಸಂಪತ್ತಿತೋ ವಿಗಚ್ಛಂತು.

"ಎಲ್ಲರೂ ಸುಖಿಗಳಾಗಿರಲಿ. ಎಲ್ಲಿಯೂ ವೈರವಿಲ್ಲದಿರಲಿ. ಎಲ್ಲರೂ ಅಕ್ಷಯರಾಗಲಿ. ಎಲ್ಲರೂ ಆನಂದದಿಂದ ಕಾಲಕಳೆಯಲಿ. ಎಲ್ಲರೂ ದುಃಖದಿಂದ ದೂರವಿರಲಿ. ಯಾರೂ ಸಿರಿಯ ಪಾಲಿನಿಂದ ವಂಚಿತರಾಗದಿರಲಿ."

ಏಷಾಸ್ಯ ಪರಮಾಗತಿರೇಷಾಸ್ಯ ಪರಮಾ ಸಂಪತ್
ಏಷೋಽಸ್ಯ ಪರಮೋಲೋಕ ಏಷೋಽಸ್ಯ ಪರಮ ಆನಂದಃ

ಮುದ್ರಕರು: ಶ್ರೀ, ಫಕೀರಪ್ಪ ಎಲ್ಲಪ್ಪ ನಿಂಡಗುದ್ದಿ. ರವೀಂದ್ರ ಪ್ರೆಸ್, ಧಾರವಾಡ.

"A greater whole-being, whole-knowledge, whole-power is needed to weld all into a greater unity of whole life."

—*Sri Aurobindo*

"A poet, a philosopher, a saint, a simple and resolute man are worth more in political reality than all the political theorists and are able to do what the latter cannot do."

—*Benedetto Croce*

"Life is a great adventure and not a set scheme. It is a game of which we can never know the rules precisely. No abstract laws will help us to lead the good life but only the living will which co-operates with the ends of evolution and the purpose of the universe."

—*Dr. S. Radhakrishnan*

"We are lovers of beauty without extravagance, lovers of wisdom without unmanliness. Wealth to us is not a mere material for vainglory but an opportunity for achivement; and poverty we think it no disgrace to acknowledge, but a great degradation to make no effort to overcome."

—*Pericles*